# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**5ನೇ ತರಗತಿ.** **ಗಣಿತ** **ಫೆಬ್ರವರಿ 2021**

| ಕ್ರ. ಸಂ | ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ವಾರ 1 | ಅಧ್ಯಾಯ –5<br>**ಹಣ ಗಣಿತ**<br>ಹಣದ ಅವಶ್ಯಕತೆ ಹಾಗೂ ಗಣಿತದ ನಾಲ್ಕು ಮೂಲಕ್ರಿಯೆಗಳನ್ನು ಒಳಗೊಂಡ ಹಣವನ್ನು ಆಧರಿಸಿದ ಸಮಸ್ಯೆಗಳನ್ನು ಬಿಡಿಸುವುದು | ಇಂದಿನ ಯುಗದಲ್ಲಿ ಮಾನವ ತನ್ನ ದೈನಂದಿನ ಜೀವನದಲ್ಲಿ ಹಣಕ್ಕೆ ಯಾವ ರೀತಿ ಪ್ರಾಮುಖ್ಯತೆ ನೀಡುತ್ತಿದ್ದಾನೆಂದು ವಿವರಿಸೋಣ ಅವನ ಪ್ರತಿಯೊಂದು ವ್ಯವಹಾರಗಳಲ್ಲಿ ಹಣದ ಬಳಕೆಯನ್ನು ತಿಳಿಸೋಣ.<br>ಉದಾ:– 1 ರೂ – 100 ಪೈಸೆಗಳು<br>1/2 ರೂ – 50 ಪೈಸೆಗಳು<br>1.1/2 ರೂ – 150 ಪೈಸೆಗಳು ಎಂದು ತಿಳಿಸೋಣ.<br>ಮೂಲಕ್ರಿಯೆಗಳಿಗೆ ಸಂಬಂಧಿಸಿದಂತೆ ಹಣದ ಸಂಕಲನ ವ್ಯವಕಲನ ಹಾಗೂ ಗುಣಾಕಾರ ಭಾಗಾಕಾರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಮಾದರಿಯಂತೆ ತೋರಿಸೋಣ. | **ಚಟುವಟಿಕೆ ಹಾಳೆ–1 ಮತ್ತು 2** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 5.1 ರ ಸಮಸ್ಯೆಗಳನ್ನು ಬಿಡಿಸುವುದು. |
| 2 | ವಾರ 2 | ದರಪಟ್ಟಿ ಹಾಗೂ ರಶೀದಿಗಳಿಗೆ ಸಂಬಂಧಿಸಿದ ಸಮಸ್ಯೆಗಳು | ಯಾವುದೇ ಅಂಗಡಿಗಳಲ್ಲಿ ಅಥವಾ ಟೆಕ್ಸ್‌ಟೈಲ್‌ಗಳಲ್ಲಿ ವಸ್ತುಗಳನ್ನು / ಬಟ್ಟೆಗಳನ್ನು ಖರೀದಿಸಿದಾಗ ಕೊಡುವ ದರಪಟ್ಟಿ ಹಾಗೂ ರಶೀದಿಗಳನ್ನು ಗಮನಿಸಲು ತಿಳಿಸೋಣ.<br>ಉದಾ:– ಬಟ್ಟೆ ಅಂಗಡಿಯಿಂದ ತಂದ ಒಂದು ಮಾದರಿ ಬಿಲ್ಲನ್ನು ತೋರಿಸುತ್ತಾ ಅಲ್ಲಿರುವ ಮುಖ್ಯ ವಿವರಗಳನ್ನು ವಿವರಿಸೋಣ | **ಚಟುವಟಿಕೆ ಹಾಳೆ–3** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 5.2ರ ಸಮಸ್ಯೆಗಳನ್ನು ಬಿಡಿಸುವುದು.. |
| 3 | ವಾರ 3 | ಅಧ್ಯಾಯ – 6<br>ತೂಕ ಮತ್ತು ಗಾತ್ರ<br>ತೂಕದ ಆದರ್ಶ ಮಾನಗಳು ಹಾಗೂ ಸಂಬಂಧಿಸಿದ ಸಮಸ್ಯೆಗಳು<br><br>ಗಾತ್ರ (ಘನಫಲ)ಕ್ಕೆ ಸಂಬಂಧಿಸಿದ ಆದರ್ಶ ಮಾನಗಳು ಹಾಗೂ ಸಮಸ್ಯೆಗಳು | ಮಕ್ಕಳಿಗೆ ತೂಕದ ಪರಿಕಲ್ಪನೆಯನ್ನು ನೀಡುತ್ತಾ ಅವುಗಳ ಆದರ್ಶ ಮಾನಗಳಿಂದ ಗ್ರಾಂ, ಕಿ.ಗ್ರಾಂ, ಡೆಸಿಗ್ರಾಂ, ಸೆಂಟಿಗ್ರಾಂ, ಕಿಲೋಗ್ರಾಂ, ಕ್ವಿಂಟಾಲ್ ಹಾಗೂ ಟನ್‌ಗಳ ಬಗ್ಗೆ ವಿವರಿಸೋಣ.<br>ಉದಾ:– 1 ಕಿ.ಗ್ರಾ – 1000 ಗ್ರಾಂ<br>1 ಕ್ವಿಂಟಾಲ್ – 100 ಕಿ. ಗ್ರಾಂ<br>ತೂಕದ ಪರಿವರ್ತನೆ ಹಾಗೂ ತೂಕದ ಮಾನಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಉದಾಹರಣೆ ಸಹಿತ ತೋರಿಸೋಣ.<br>ಮಕ್ಕಳಿಗೆ ಗಾತ್ರ ಅಥವಾ ಘನಫಲಗಳ ಪರಿಕಲ್ಪನೆಯನ್ನು ನೀಡುತ್ತಾ ಅವುಗಳ ಆದರ್ಶಮಾನಗಳಾದ ಲೀಟರ್, ಮಿಲಿಲೀಟರ್, ಕಿಲೋಲೀಟರ್, ಡೆಕಾಲೀಟರ್ ಹೆಕ್ಟೋಲೀಟರ್‌ಗಳ ಬಗ್ಗೆ ವಿವರಿಸೋಣ.<br>ಉದಾ:– 1ಲೀಟರ್–1000 ಮಿಲಿಲೀಟರ್<br>1ಕಿಲೋಲೀಟರ್–1000 ಲೀಟರ್ | **ಚಟುವಟಿಕೆ ಹಾಳೆ–4** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 6.1ರ ಸಮಸ್ಯೆಗಳನ್ನು ಬಿಡಿಸುವುದು.<br><br>**ಚಟುವಟಿಕೆ ಹಾಳೆ–5** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 6.2ರ ಸಮಸ್ಯೆಗಳನ್ನು ಬಿಡಿಸುವುದು |

| | | | | |
|---|---|---|---|---|
| 4 | ವಾರ 4 | ಅಧ್ಯಾಯ–7 ಕಾಲ. ಗಡಿಯಾರದಲ್ಲಿ ಸಮಯ ನೋಡುವುದು ಹಾಗೂ 24 ಗಂಟೆ ಗಡಿಯಾರದ ಸಮಯಕ್ಕೆ ಪರಿವರ್ತಿಸುವುದು. | ಮಕ್ಕಳಿಗೆ ಗಡಿಯಾರದಲ್ಲಿ 12 ಸಂಖ್ಯೆಗಳಿರುತ್ತವೆ ಅವುಗಳನ್ನು ತೋರಿಸಲು 3 ಮುಳ್ಳುಗಳಿರುತ್ತವೆ. ಒಂದು ಮುಳ್ಳು ಗಂಟೆಯನ್ನು, ಇನ್ನೊಂದು ಮುಳ್ಳು ನಿಮಿಷವನ್ನು ಹಾಗೂ ಮತ್ತೊಂದು ಮುಳ್ಳು ಸೆಕೆಂಡನ್ನು ತೋರಿಸುವುದು ಎಂದು ವಿವರಿಸೋಣ<br>ಉದಾ:– 1 ಗಂಟೆ – 60 ನಿಮಿಷ.<br>1 ನಿಮಿಷ – 60 ಸೆಕೆಂಡಗಳು<br>ಗಡಿಯಾರದಲ್ಲಿ ಅಪರಾಹ್ನದ ಅವಧಿಯಲ್ಲಿ 1 ಗಂಟೆಯನ್ನು 13 ಗಂಟೆ 2 ಗಂಟೆಯನ್ನು 14 ಗಂಟೆ ಹೀಗೆ 24 ಗಂಟೆಗಳನ್ನು ಪರಿವರ್ತನೆ ಮಾಡುವ ರೀತಿಯನ್ನು ತಿಳಿಸೋಣ. | **ಚಟುವಟಿಕೆ ಹಾಳೆ–6** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 7.1ರ ಸಮಸ್ಯೆಗಳನ್ನು ಬಿಡಿಸುವುದು. |
| | | ಸಂಕಲನ ಹಾಗೂ ವ್ಯವಕಲನಗಳನ್ನು ಒಳಗೊಂಡ ಸಮಸ್ಯೆಗಳನ್ನು ಬಿಡಿಸುವುದು. | ಕಾಲಕ್ಕೆ ಸಂಬಂಧಿಸಿದಂತೆ ಸಂಕಲನ ಹಾಗೂ ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವ ರೀತಿಯನ್ನು ವಿವರಿಸೋಣ<br>ಮಾದರಿ:– 2 ಗಂ, 10 ನಿ<br>+6 ಗಂ, 20 ನಿ<br>8 ಗಂ, 30 ನಿ | **ಚಟುವಟಿಕೆ ಹಾಳೆ–7** ನ್ನು ಪಠ್ಯಪುಸ್ತಕದಲ್ಲಿ ಅಭ್ಯಾಸ 7.2 ಹಾಗೂ 7.3ರ ಸಮಸ್ಯೆಗಳನ್ನು ಬಿಡಿಸುವುದು |

**ಚಟುವಟಿಕೆ ಹಾಳೆ – 01**

**ಇವುಗಳ ಬೆಲೆ ಕಂಡುಹಿಡಿಯಿರಿ. (ಸಂಕಲನ)**





**ಚಟುವಟಿಕೆ ಹಾಳೆ – 02**

**ಇವುಗಳ ಬೆಲೆ ಕಂಡುಹಿಡಿಯಿರಿ.**

ಮಾದರಿ :– ರೂ 45. ರೂ 5ರ ಗುಣಲಬ್ಧ =45x5

=ರೂ225.

1) ರೂ 24 ಹಾಗೂ ರೂ 8ರ ಗುಣಲಬ್ಧ =

2) ರೂ 450 ಹಾಗೂ ರೂ 9ರ ಭಾಗಲಬ್ಧ =

3) ರೂ 580 ಹಾಗೂ ರೂ 12ರ ಗುಣಲಬ್ಧ =

4) ರೂ 260 ಹಾಗೂ ರೂ 13ರ ಭಾಗಲಬ್ಧ =

5) ರೂ 181 ಹಾಗೂ ರೂ 15ರ ಗುಣಲಬ್ಧ =

6) ರೂ 210 ಹಾಗೂ ರೂ 21ರ ಭಾಗಲಬ್ಧ =

7) ರೂ 44 ಹಾಗೂ ರೂ 22ರ ಗುಣಲಬ್ಧ =

8) ರೂ 171 ಹಾಗೂ ರೂ 19ರ ಭಾಗಲಬ್ಧ =

9) ರೂ 200 ಹಾಗೂ ರೂ 20ರ ಭಾಗಲಬ್ಧ =

## ಚಟುವಟಿಕೆ ಹಾಳೆ – 03

### ಈ ಕೆಳಗಿನ ವಿವರಗಳಿಗೆ ದರಪಟ್ಟಿ ಅಥವಾ ರಶೀದಿ ತಯಾರಿಸಿ

ಮಾದರಿ :– ಕು॥ ದೀಪಾಳು ದೀಪಾವಳಿ ಹಬ್ಬದ ಪ್ರಯುಕ್ತ ವಿಶ್ವಬಂಧು ಸ್ಟೋರ್ ಅಂಗಡಿಯಿಂದ ಕೆಳಕಂಡ ವಸ್ತುಗಳನ್ನು ಖರೀದಿಸಿದ್ದಾರೆ.

ಉದ್ದಿನ ಬೇಳೆ 1 ಕೆ.ಜಿಗೆ 90 ರೂ ನಂತೆ –2 ಕೆ.ಜಿ

ಹೆಸರು ಬೇಳೆ 1 ಕೆ.ಜಿ.ಗೆ 60 ರೂ ನಂತೆ –1 ಕೆ.ಜಿ

ತೊಗರಿ ಬೇಳೆ 1 ಕೆ.ಜಿಗೆ 110 ರೂ ನಂತೆ –2 ಕೆ.ಜಿ

ಬೆಲ್ಲ 1 ಕೆ.ಜಿಗೆ 40 ರೂನಂತೆ –3 ಕೆ.ಜಿ

| ಅಂಗಡಿಯ ಹೆಸರು:– ವಿಶ್ವಬಂಧು ಸ್ಟೋರ್ಸ್ , ರಂಗನಾಥ ಬಡಾವಣೆ, ದಾವಣಗೆರೆ.<br>ನಂ:210 ಹೆಸರು:– ಕು॥ ದೀಪಾ ದಿ:05.03.2021 | | | | |
|---|---|---|---|---|
| ಕ್ರ.ಸಂ | ವಿವರಗಳು | ಪರಿಮಾಣ(ಕೆ.ಜಿ) | ಬೆಲೆ | ಒಟ್ಟು ಹಣ |
| 1 | ಉದ್ದಿನ ಬೇಳೆ | 2 | 90–00 | 180–00 |
| 2 | ಹೆಸರು ಬೇಳೆ | 1 | 60–00 | 60–00 |
| 3 | ತೊಗರಿ ಬೇಳೆ | 2 | 110–00 | 220–00 |
| 4 | ಬೆಲ್ಲ | 3 | 40–00 | 120–00 |
| ಒಟ್ಟು ಮೊತ್ತ | | | | 580–00 |

1) ವಿವೇಕನು "ರಾಜ್‌ಕುಮಾರ್ ಫ್ರೂಟ್ಸ್ ಸ್ಟಾಲ್"ನಿಂದ ಕೆಳಕಂಡ ಹಣ್ಣುಗಳನ್ನು ಖರೀದಿಸಿದ್ದಾರೆ. ಕೆಳಗಿನ ವಿವರಗಳಿಗೆ ದರಪಟ್ಟಿ ರಚಿಸಿರಿ.

ಸೇಬು ಕೆ.ಜಿ.ಗೆ ರೂ 100 ರಂತೆ – 2 ಕೆ.ಜಿ

ಕಿತ್ತಳೆ ಕೆ.ಜಿ.ಗೆ ರೂ 70 ರಂತೆ – 2 ಕೆ.ಜಿ

ದ್ರಾಕ್ಷಿ ಕೆ.ಜಿ.ಗೆ ರೂ 90 ರಂತೆ – 1.1/2 ಕೆ.ಜಿ

ಆನಾನಸ್ ಕೆ.ಜಿ.ಗೆ ರೂ 60 ರಂತೆ– 2 ಕೆ.ಜಿ

**ಚಟುವಟಿಕೆ ಹಾಳೆ – 04.**

**ಈ ಕೆಳಗಿನವುಗಳನ್ನು ಪರಿವರ್ತಿಸಿ.**

ಮಾದರಿ :– 5 ಕಿ.ಗ್ರಾಂ ______________ಗ್ರಾಂ ಗಳು

1 ಕಿ.ಗ್ರಾಂ – 1000 ಗ್ರಾಂ ಗಳು

5 ಕಿ.ಗ್ರಾಂ – 5000 ಗ್ರಾಂ ಗಳು

1) 3 ಕಿ.ಗ್ರಾಂ 500 ಗ್ರಾಂ ______________ ಗ್ರಾಂ ಗಳು

2) 2000 ಗ್ರಾಂ ______________ ಕಿ.ಗ್ರಾಂ.

3) 13 ಕ್ವಿಂಟಾಲ್ ಗ್ರಾಂ ______________ ಕಿ.ಗ್ರಾಂ

4) 5 ಕಿ.ಗ್ರಾಂ 250 ಗ್ರಾಂ ______________ ಗ್ರಾಂ ಗಳು

5) 2500 ಕಿ.ಗ್ರಾಂ ______________ ಕ್ವಿಂಟಾಲ್

6) 9 ಕಿ.ಗ್ರಾಂ 150 ಗ್ರಾಂ ______________ ಗ್ರಾಂ ಗಳು

7) 9088 ಕಿ.ಗ್ರಾಂ ______________ ಕ್ವಿಂಟಾಲ್

**8)** 6 ಕಿ.ಗ್ರಾಂ 15 ಗ್ರಾಂ ______________ ಗ್ರಾಂ ಗಳು

## ಚಟುವಟಿಕೆ ಹಾಳೆ – 05.

### ಈ ಕೆಳಗಿನವುಗಳನ್ನು ಪರಿವರ್ತಿಸಿ.

ಮಾದರಿ :– 5 ಲೀ ________________ಮಿ.ಲೀ

1 ಲೀ – 1000 ಮಿ.ಲೀ

1 ಲೀ – 5000 ಮಿ.ಲೀ

1) 8 ಲೀ 500 ಮಿ.ಲೀ ________________ ಮಿ.ಲೀ.

2) 5 ಲೀ 100 ಮಿ.ಲೀ ________________ ಮಿ.ಲೀ.

3) 2500 ಮಿ.ಲೀ ________________ ಲೀ

4) 4 ಲೀ 350 ಮಿ.ಲೀ ________________ ಮಿ.ಲೀ

5) 4800 ಮಿ.ಲೀ ________________ ಲೀ

6) 15 ಲೀ ________________ ಮಿ.ಲೀ

7) 8500 ಮಿ.ಲೀ ________________ ಲೀ

8) 10 ಲೀ ________________ ಮಿ.ಲೀ

**9**) 1250 ಮಿಲೀ ________________ ಮಿ.ಲೀ

**ಚಟುವಟಿಕೆ ಹಾಳೆ – 06.**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1) ಒಂದು ದಿನಕ್ಕೆ ಎಷ್ಟು ಗಂಟೆಗಳು?

2) ಒಂದು ಗಂಟೆಗೆ ಎಷ್ಟು ನಿಮಿಷಗಳು?

3) ಒಂದು ನಿಮಷಕ್ಕೆ ಎಷ್ಟು ಸೆಕೆಂಡುಗಳು?

4) ಒಂದು ತಿಂಗಳಿಗೆ ಎಷ್ಟು ದಿನಗಳು?

5) ಒಂದು ವಾರಕ್ಕೆ ಎಷ್ಟು ದಿನಗಳು?

6) ಒಂದು ವರ್ಷಕ್ಕೆ ಎಷ್ಟು ದಿನಗಳು?

7) ಒಂದು ತಿಂಗಳಿಗೆ ಎಷ್ಟು ವಾರಗಳು?

8) ಫೆಬ್ರವರಿ ತಿಂಗಳಿನಲ್ಲಿ ಎಷ್ಟು ದಿನಗಳಿವೆ?

9) ಒಂದು ವರ್ಷದಲ್ಲಿ ಎಷ್ಟು ತಿಂಗಳುಗಳಿವೆ?

10) ಒಂದು ವರ್ಷದಲ್ಲಿ ಎಷ್ಟು ವಾರಗಳಿವೆ?

11) ಅಧಿಕ ವರ್ಷದಲ್ಲಿ ಎಷ್ಟು ದಿನಗಳಿವೆ?

12) 4 ಗಂಟೆ 20 ನಿಮಿಷ ಹಾಗೂ 2 ಗಂಟೆ 20 ನಿಮಿಷಗಳ ಮೊತ್ತವೆಷ್ಟು?

13) 7 ಗಂಟೆ 30 ನಿಮಿಷ ಹಾಗೂ 5 ಗಂಟೆ 15 ನಿಮಿಷಗಳ ವ್ಯತ್ಯಾಸವೆಷ್ಟು?

14) ಅಧಿಕ ವರ್ಷದಲ್ಲಿ ಫೆಬ್ರವರಿಯಲ್ಲಿ ಎಷ್ಟು ದಿನಗಳಿವೆ?

**15)** ಒಂದು ವರ್ಷದಲ್ಲಿ ಎಷ್ಟು ಕಾಲಗಳಿವೆ?

**ಚಟುವಟಿಕೆ ಹಾಳೆ – 06.**

**ಈ ಕೆಳಗಿನ ಸಮಸ್ಯೆಗಳನ್ನು ಬಿಡಿಸಿರಿ.**

ಮಾದರಿ :– ರಮೇಶನು ಹಣ್ಣಿನ ಅಂಗಡಿಗೆ ಕೆಲಸ ಮಾಡಲು 7 ಎ.ಎಂ ಗೆ ಹೋಗುತ್ತಾನೆ. ಅಂಗಡಿಯಿಂದ ಕೆಲಸ ಮುಗಿಸಿ 1.ಪಿ.ಎಂ.ಗೆ ಮನೆಗೆ ಬರುತ್ತಾನೆ. ಹಾಗಾದರೆ ಅವನು ಮಾಡಿದ ಕೆಲಸದ ಅವಧಿ ತಿಳಿಸಿ.

ಉತ್ತರ:– ರಮೇಶನು ಅಂಗಡಿಗೆ ಹೋದ ಸಮಯ 7 ಎ.ಎಂ, ರಮೇಶ ಅಂಗಡಿಯಿಂದ ಮರಳಿದ ಸಮಯ 1 ಪಿ.ಎಂ

1 ಗಂಟೆಯ ಅವಧಿಯನ್ನು 13 ಗಂಟೆಗೆ ಪರಿವರ್ತಿಸಿದೆ.

13 – 00 ಪಿ.ಎಂ

7 – 00 ಎ.ಎಂ

6 – 00

ರಮೇಶ ಕೆಲಸ ಮಾಡಿದ ಅವಧಿ 6 ಗಂಟೆಗಳು.

1) ಪ್ರತಿದಿನ ಶಾಲೆಯು ಬೆಳಗ್ಗೆ 10 ಎ.ಎಂ ನಿಂದ ಪ್ರಾರಭವಾಗಿ 4.30 ಪಿ.ಎಂ ಗೆ ಮುಕ್ತಾಯವಾಗುತ್ತದೆ. ಹಾಗಾದರೆ ಶಾಲೆಯ ಅವಧಿ ಎಷ್ಟು?.

2) ನೀರಜ್ ಪ್ರತಿದಿನ 6 ಪಿ.ಎಂಗೆ ಓದಲು ಕೂರುತ್ತಾನೆ. ನಂತರ ಅಭ್ಯಾಸ ಮುಗಿಸಿ 9.30 ಪಿ.ಎಂಗೆ ಊಟಕ್ಕೆ ಬರುತ್ತಾನೆ. ಹಾಗಾದರೆ ಅವನು ಅಭ್ಯಾಸ ಮಾಡಿದ ಒಟ್ಟು ಅವಧಿ ಎಷ್ಟು?

**3)** ಸೀತಾಳು ತನ್ನ ಗಂಡನ ಮನೆಗೆ ಹೋಗಲು 11.00 ಎ.ಎಂ.ಗೆ ಬಸ್‌ನ್ನು ಹತ್ತುತ್ತಾಳೆ. ಅವಳು ಗಂಡನ ಮನೆ ತಲುಪಿದಾಗ ಸಮಯ 6.30 ಪಿ.ಎಂ ಆಗಿತ್ತು ಆದರೆ ಅವಳು ಗಂಡನ ಮನೆ ತಲುಪಲು ತೆಗೆದುಕೊಂಡ ಸಮಯವೆಷ್ಟು?